ಸಂಧಿಲಿನ್
ಗಂಟುನೋವು, ಬೆನ್ನು ನೋವು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ
ನೋವಿಗೆ ಶೀಘ್ರ ಪರಿಣಾಮಕಾರಿ
SDM ISO / GMP CERTIFIED
ತಯಾರಕರು sdmaph@gmail.com
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ

ಸಾಪ್ತಾಹಿಕ
# ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ



Regd.No.UDP/1259/2015-17 | udayavani.com | UDAYAVANI – KANNADA DAILY – MANIPAL ಮಣಿಪಾಲ, ರವಿವಾರ, ಎಪ್ರಿಲ್ 2, 2017 ಬೆಲೆ: ₹ 5-00 ವಿದೇಶ ಬೆಲೆ: ₹ 6-00 ಪುಟಗಳು 14+8+4 (U

### ರಾಷ್ಟ್ರ ಮಟ್ಟದ ತಾಂತ್ರಿಕ ಉತ್ಸವ

## ಸಹ್ಯಾದ್ರಿ ಕಾಲೇಜಿಗೆ 'ಅತ್ಯುತ್ತಮ ಟೆಕ್ನಿಕಲ್ ಇನ್ನೋವೇಶನ್ ಪ್ರಶಸ್ತಿ'



ಅತ್ಯುತ್ತಮ ಟೆಕ್ನಿಕಲ್ ಇನ್ನೋವೇಶನ್ ಪ್ರಶಸ್ತಿ ಪಡೆದ ವಿದ್ಯಾರ್ಥಿಗಳ ತಂಡ.

ಮಂಗಳೂರು, ಎ. 1: ಅಡ್ಯಾರ್ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್‌ನ ಮೊದಲ ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿಗಳ ಪ್ರೊ-ಮೋಟಾರ್ಸ್ ತಂಡವು ಜಾರ್ಖಂಡ್‌ನ ಜೆಮ್‌ಷಡ್‌ಪುರ ಎನ್.ಐ.ಟಿ.ಯಲ್ಲಿ ಮಾ.24ರಿಂದ 26ರ ತನಕ ನಡೆದ ಮೂರು ದಿನಗಳ ರಾಷ್ಟ್ರ ಮಟ್ಟದ ತಾಂತ್ರಿಕ ಉತ್ಸವ 'ಓಜಸ್- 2017'ನಲ್ಲಿ 'ಅತ್ಯುತ್ತಮ ಟೆಕ್ನಿಕಲ್ ಇನ್ನೋವೇಶನ್ ಪ್ರಶಸ್ತಿ' ಗೆದ್ದುಕೊಂಡಿದೆ.

ತಾಂತ್ರಿಕ ತರಬೇತುದಾರ ಡಿಟಿಲ್ಯಾಬ್ಸ್‌ನ ಗೌತಮ್ ನಾಯಕ್ ಅವರ ನೇತೃತ್ವದಲ್ಲಿ ಮೊದಲ ವರ್ಷದ ಎಂಜಿನಿಯರಿಂಗ್‌ನ 10 ಮಂದಿ ವಿದ್ಯಾರ್ಥಿನಿಯರು ಮತ್ತು 6 ಮಂದಿ ವಿದ್ಯಾರ್ಥಿಗಳ ಸಹಿತ ಒಟ್ಟು 16 ಮಂದಿ ವಿದ್ಯಾರ್ಥಿಗಳು ಈ ಉತ್ಸವದಲ್ಲಿ ಭಾಗವಹಿಸಿ ರೋಬೋಟ್‌ಗಳನ್ನು ಪ್ರಸ್ತುತ ಪಡಿಸಿ ಈ ಪ್ರಶಸ್ತಿಯನ್ನು ಗೆದ್ದಿದ್ದಾರೆ.

ಸಹ್ಯಾದ್ರಿ ಕಾಲೇಜು ತಂಡದ ರೋಬೋಟ್ ಇತರ ಎಲ್ಲ ಎನ್.ಐ.ಟಿ. ಮತ್ತು ಐ.ಐ.ಟಿ. ತಂಡಗಳು ಪ್ರಸ್ತುತ ಪಡಿಸಿದ ರೋಬೋಟ್‌ಗಳ ಪೈಕಿ ಏಕಮಾತ್ರ ನಿಸ್ತಂತು ರೋಬೋಟ್ ಆಗಿತ್ತು.

ಸಹ್ಯಾದ್ರಿ ಕಾಲೇಜಿನ ಆಡಳಿತ ಮಂಡಳಿ ಭಂಡಾರಿ ಫೌಂಡೇಶನ್‌ನ ಅಧ್ಯಕ್ಷ ಡಾ| ಮಂಜುನಾಥ್ ಭಂಡಾರಿ ಮತ್ತು ಪ್ರಾಂಶುಪಾಲ ಡಾ| ಉಮೇಶ್ ಎಂ. ಭೂಷಿ ಅವರು ತಂಡದ ಸಾಧನೆಯ ಕುರಿತು ಹರ್ಷ ವ್ಯಕ್ತಪಡಿಸಿದ್ದಾರೆ.

ಸೋಮವಾರ, 3 ಏಪ್ರಿಲ್ 2017 | ಪುಟಗಳು: 14+4 | ಬೆಲೆ: ₹ 5.00
www.vijaykarnataka.com
ಸಂಪುಟ: 16 | 247
VK
ವಿಜಯ ಕರ್ನಾಟಕ
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ | ಚಿ



ಚಂದ್ರಬಾಬು ನಾಯ್ಡು ಪುತ್ರ ನಾರಾ ಲೋಕೇಶ್‌ಗೆ ಆಂಧ್ರ ಪ್ರದೇಶ ಸಂಪುಟದಲ್ಲಿ ಸಚಿವ ಸ್ಥಾನ P10
ವಿಮಾನ ಇಂಧನ ದರ ಶೇ. 5 ಇಳಿಕೆ, ಸಬ್ಸಿಡಿಯುಕ್ತ ಎಲ್‌ಪಿಜಿ ಸಿಲಿಂಡರ್ ದರ 5.57 ರೂ. ಏರಿಕೆ P11
ಗೋಪಿಕಾಪ್ರಿಯನಿಗೆ ರೋಮಿಯೋ ಟ್ಯಾಗ್ ಕಟ್ಟಿ ಪೇಚಿಗೆ ಸಿಲುಕಿದ ವಕೀಲ ಪ್ರಶಾಂತ್ ಭೂಷಣ್!

# ಸಹ್ಯಾದ್ರಿ ವಿದ್ಯಾರ್ಥಿಗಳಿಗೆ ಅತ್ಯುತ್ತಮ ತಾಂತ್ರಿಕ ಇನ್ನೊವೇಶನ್ ಪ್ರಶಸ್ತಿ



**ಮಂಗಳೂರು:** ಅಡ್ಯಾರಿನ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಮ್ಯಾನೇಜ್ಮೆಂಟ್ ಮೊದಲ ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿಗಳ ಪ್ರೊ-ಮೊಟೋರ್ಸ್ ತಂಡ ಎನ್‌ಐಟಿ ಜಮ್ಶೆಡ್ಪುರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅತ್ಯುತ್ತಮ ತಾಂತ್ರಿಕ ಇನ್ನೊವೇಶನ್ ಪ್ರಶಸ್ತಿ ಗೆದ್ದುಕೊಂಡಿದೆ.

ಡೀಟೀಲ್ಯಾಬ್ಸ್ ತಾಂತ್ರಿಕ ಟ್ರೆನರ್ ಗೌತಮ್ ನಾಯಕ್ ಜತೆಗೂಡಿ ವಿದ್ಯಾರ್ಥಿಗಳು ಜೆಮ್ಶೆಡ್ಪುರ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ನಡೆದ ಮೂರು ದಿನಗಳ ತಾಂತ್ರಿಕ ಫೆಸ್ಟ್ ಓಜಾಸ್ 17ರಲ್ಲಿ ಭಾಗವಹಿಸಿದ್ದರು. ಸಹ್ಯಾದ್ರಿಯ ಮೊಟಾರ್ಸ್ ತಂಡ ನಿರ್ಮಿಸಿದ ಕ್ರಿಯಾತ್ಮಕ ಕಾರ್ಯಕ್ಕೆ ತಾಂತ್ರಿಕ ಇನ್ನೊವೆಶನ್ ಪ್ರಶಸ್ತಿ ಗಳಿಸಿದೆ.

ಸಹ್ಯಾದ್ರಿಯ ರೊಬೊಟ್ ವಿವಿಧ ಎನ್‌ಐಟಿ ಮತ್ತು ಐಐಟಿ ನ ಇತರೆ ತಂಡಗಳು ಎಲ್ಲ ರೊಬೊಟ್‌ಗಳು ನಡುವೆ ಏಕ ಮಾತ್ರ ನಿಸ್ತಂತು ರೊಬೊಟ್ ಆಗಿತ್ತು. ಭಂಡಾರಿ ಫೌಂಡೇಶನ್ ಅಧ್ಯಕ್ಷ ಡಾ.ಮಂಜುನಾಥ್ ಭಂಡಾರಿ ಮತ್ತು ಪ್ರಿನ್ಸಿಪಾಲ್ ಡಾ.ಉಮೇಶ್ ಎಂ.ಭೂಷಿ ಅಭಿನಂದಿಸಿದ್ದಾರೆ.

ಭಾನುವಾರ 2.4.2017 epaper.kannadaprabha.in

# ಕನ್ನಡಪ್ರಭ

ನೇರ.ದಿಟ್ಟ.ನಿರಂತರ



ಲಕ್ಷಾಂತರ ಭಕ್ತರ ಸ

ಸಿದ್ಧಗಂಗಾ ಶ್ರೀಗಳ

110ನೇ ಹುಟ್ಟುಹಬ್ಬಕ್ಕೆ 110

ಪಾಲ. ವಿವಿಧ ಮಠಾಧೀಶರಿಂದ

ಪ್ರಧಾನಿ ಮೋದಿಯವರಿಂದಲೂ

KP




ಮಂಗಳೂರು ಅಡ್ಯಾರಿನ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ವಿಶ್ವ ಜಲ ದಿವನ್ನು ಇತ್ತೀಚೆಗೆ ಆಚರಿಸಲಾಯಿತು. ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸದಸ್ಯ ಕಾರ್ಯದರ್ಶಿ ಮಲ್ಲನ ಗೌಡ ಕಾರ್ಯಕ್ರಮವನ್ನು ಉದ್ಘಾಟಿಸಿದರು.